# ಮಂಗಳಂ ಜಯ ಮಂಗಳಂ ವಾತಸುತ

**Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.

ರಾಗ: ಶ್ರೀರಾಗ ತಾಳ: ಅಟ

ಮಂಗಳಂ ಜಯ ಮಂಗಳಂ ॥ ಪ ॥

ವಾತಸುತ ಹನುಮನ ಒಡೆಯಗೆ ಮಂಗಳ
ದಾತ ಶ್ರೀ ರಘುಪತಿಗೆ ಮಂಗಳ
ಸೇತುವೆಗಟ್ಟಿದ ರಾಯಗೆ ಮಂಗಳ
ಸೀತಾರಮಣಗೆ ಶುಭ ಮಂಗಳ ॥ 1 ॥

ಬಿಲ್ಲ ಹಿಡಿದು ಬಲು ಬಿಂಕದ ದೈತ್ಯರ
ಹಲ್ಲ ಮುರಿದವಗೆ ಮಂಗಳ
ಕಲ್ಲಾದಹಲ್ಯೆಯನುದ್ಧಾರ ಮಾಡಿದ
ಬಲ್ಲಿದ ದಾಶರಥಿಗೆ ಮಂಗಳ ॥ 2 ॥

ಹರಧನು ಮುರಿದ ವಿನೋದಿಗೆ ಮಂಗಳ
ವರದ ತಿಮ್ಮಪ್ಪಗೆ ಮಂಗಳ
ಪುರಂದರ ವಿಠಲ ರಾಯಗೆ ಮಂಗಳ
ಸರುವೋತ್ತಮನಿಗೆ ಶುಭ ಮಂಗಳ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ವಾತಾಸುತ** = ಹನುಮ

**Classification:** Keerthane
**Ankita:** purandara vittala
**Location:** NA

**Category:** Hanuma Stuti, mangala song

**Sub-Category:** hanuma, rama, sita, shubha, mangala, asura, ahalya, srinivasa, hari sarvottama,

**Pravachana:** NA

**Explanation:** NA